# ಕಾರ್ಕಳದ ಜೋಗುಳ ಬೆಟ್ಟು ಶ್ರೀರಾಮಧಾಮ ಧ್ಯಾನ ಮಂದಿರದ ಪ್ರವೇಶೋತ್ಸವ ಮತ್ತು ಶ್ರೀ ರಾಮದೇವರ ಪ್ರತಿಷ್ಠಾ ಕಾರ್ಯಕ್ರಮ



ಎಳವೆಯಿಂದಲೇ ಶ್ರೀ ರಾಮದೇವರ ಅಪಾರ ಭಕ್ತರಾಗಿರುವ ಶ್ರೀ ಶಶಿಧರ ರಾವ್ ಕೊಲ್ಪೆ ಇವರಿಗೆ ಶ್ರೀ ರಾಮದೇವರ ಧ್ಯಾನ ಮಂದಿರವೊಂದನ್ನು ಸ್ಥಾಪಿಸಿ ಆ ಮೂಲಕ ತಾನೂ ಹಾಗೂ ಭಕ್ತಾದಿಗಳು ಶ್ರೀ ರಾಮದೇವರ ಪೂಜಾ ಕೈಂಕರ್ಯಗಳಲ್ಲಿ ಇನ್ನಷ್ಟು ತೊಡಗಿಸಿಕೊಳ್ಳಬೇಕೆಂದು ಬಹುದಿನಗಳ ಆಸೆಯಾಗಿತ್ತು. ತಮ್ಮ ಹಂಬಲಕ್ಕೆ ಬೆಂಬಲವಾಗಿ ನಿಂತವರು ಸಹೋದರರಾದ ಶ್ರೀ ಗೋಪಾಲಕೃಷ್ಣ, ಕೊಲ್ಪೆ, ಶ್ರೀ ಭಾಸ್ಕರ ರಾವ್ ಕೊಲ್ಪೆ, ಶ್ರೀ ಚಂದ್ರಶೇಖರ ರಾವ್ ಕೊಲ್ಪೆ, ಶ್ರೀ ವಿಠಲರಾವ್ ಕೊಲ್ಪೆ, ಶ್ರೀ ಮೋಹನ್‌ರಾವ್ ಕೊಲ್ಪೆ ಹಾಗೂ ಕುಟುಂಬವರ್ಗದವರು. ಇವರೆಲ್ಲರ ಪ್ರಯತ್ನದ ಫಲವಾಗಿ ಕಾರ್ಕಳದ ಜೋಗುಳಬೆಟ್ಟು ಎಂಬಲ್ಲಿ ಒಂದು ಸಂವತ್ಸರದೊಳಗೆ ಭವ್ಯವಾದ ಶ್ರೀ ರಾಮಧಾಮ ಧ್ಯಾನಮಂದಿರ ನಿರ್ಮಾಣಗೊಂಡು ದಿನಾಂಕ 13-04-2008ನೇ ಭಾನುವಾರದಂದು ಪ್ರಾತಃಕಾಲ 5-24ಕ್ಕೆ ಮೀನ ಲಗ್ನ ಸುಮುರ್ತದಲ್ಲಿ ಪ್ರವೇಶೋತ್ಸವ ಹಾಗೂ ಶ್ರೀ ರಾಮದೇವರ ಪ್ರತಿಷ್ಠಾ ಕಾರ್ಯಕ್ರಮ ಅನೇಕ ಭಕ್ತಜನರ ಉಪಸ್ಥಿತಿಯಲ್ಲಿ ಅದ್ದೂರಿಯಾಗಿ ನಡೆಯಿತು.

ಪಾವಂಜೆ ಶ್ರೀ ಕೆ. ದೇವರಾಜ ಹೆಬ್ಬಾರ್ ಇವರ ನೇತೃತ್ವದ ವೈದಿಕ ವರ್ಗದವರ ಮೂಲಕ ಶ್ರೀ ರಾಮದೇವರ ಪ್ರತಿಷ್ಠಾ ಕಾರ್ಯಕ್ರಮದ ಅಂಗವಾಗಿ ಶ್ರೀ ರಾಮದೇವರ ಪೂಜೆ, ಗಣಹೋಮ, ಏಕಾದಶ ರುದ್ರಾಭಿಷೇಕ, ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಶ್ರೀ ದುರ್ಗಾನಮಸ್ಕಾರ ಪೂಜೆಗಳು ನಡೆದವು. ಸಾಯಂಕಾಲ ಕಾರ್ಕಳ ಅನಂತಶಯನದ ಶ್ರೀ ಶಾರದಾ ಮಹಿಳಾ ಮಂಡಳಿ ಹಾಗೂ ದುರ್ಗದ ಶ್ರೀ ಹರಿಹರೇಶ್ವರ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮಗಳು ಭಕ್ತಾದಿಗಳನ್ನು ಭಕ್ತಿಸಾಗರದಲ್ಲಿ ತೇಲುವಂತೆ ಮಾಡಿತು. ಮಧ್ಯಾಹ್ನ ಹಾಗೂ ರಾತ್ರಿ ಹೊತ್ತು ಭಕ್ತಾದಿಗಳಿಗೆ ಅನ್ನಸಂತರ್ಪಣಾ ಕಾರ್ಯಕ್ರಮ ಅತ್ಯಂತ ಅಚ್ಚುಕಟ್ಟಾಗಿ ನಡೆಯಿತು.

ರಾತ್ರಿ ಘಂಟೆ 9-30ಕ್ಕೆ ಸರಿಯಾಗಿ ಧಾರ್ಮಿಕ ಸಭಾ ಕಾರ್ಯಕ್ರಮವು ಶ್ರೀ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ ಶೃಂಗೇರಿ ಶಂಕರಾಚಾರ್ಯ ಮಹಾಸಂಸ್ಥಾನಂ ಕೋಟೆಕಾರು ಶಾಖೆ, ಮಂಗಳೂರು ಇದರ ಧರ್ಮದರ್ಶಿಗಳಾದ ಶ್ರೀಯುತ ಬೊಳ್ಳಾವ ಸತ್ಯಶಂಕರ, ಕೋಟೆಕಾರು ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಕು. ಸುಷ್ಮಾ ಕೋಲ್ಪೆ, ಶ್ರೀಮತಿ ಮಲ್ಲಿಕಾ ರಾಜೇಶ್ ಕೊಲ್ಪೆ ಇವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಕೊಲ್ಪೆ ಕುಟುಂಬದ ಹಿರಿಯರಾದ ಶ್ರೀ ಗೋಪಾಲಕೃಷ್ಣ ಕೊಲ್ಪೆ ಇವರು ಅತಿಥಿಗಳನ್ನು ಸ್ವಾಗತಿಸುವುದರೊಂದಿಗೆ ಶ್ರೀ ರಾಮಧಾಮ ಧ್ಯಾನಮಂದಿರದ ಸ್ಥಾಪನೆಗೆ ಕಾರಣಗಳು ಹಾಗೂ ಉದ್ದೇಶಗಳ ಬಗ್ಗೆ ತಮ್ಮ ಪ್ರಾಸ್ತವಿಕ ಭಾಷಣದಲ್ಲಿ ಹೇಳುತ್ತಾ ಎಲ್ಲಾ ಭಕ್ತಾಭಿಮಾನಿಗಳು ಈ ಮಂದಿರವನ್ನು ಸದುಪಯೋಗ ಪಡಿಸುವುದರೊಂದಿಗೆ ಶ್ರೀ ರಾಮದೇವರ ಕೃಪೆಗೆ ಪಾತ್ರರಾಗುವಂತೆ ವಿನಂತಿಸಿದರು. ಮುಖ್ಯ ಅತಿಥಿಗಳಾಗಿ ಕಾರ್ಕಳ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಸುನಿಲ್ ಕುಮಾರ್ ಇವರು ಶ್ರೀ ರಾಮನ ಸಂದೇಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರಲ್ಲದೆ ಧ್ಯಾನ ಮಂದಿರವನ್ನು ಸ್ಥಾಪಿಸಿದ ಕೊಲ್ಪೆ ಸಹೋದರರ ಪ್ರಯತ್ನವನ್ನು ಶ್ಲಾಘಿಸಿದರು.ಅಧ್ಯಕ್ಷರಾದ ಶ್ರೀ ಸತ್ಯಶಂಕರ ಬೊಳ್ಳಾವ ಇವರು ಶುಭಾಶಂಸನೆಗೈದು, ಕೊಲ್ಪೆ ಕುಟುಂಬದ ಹಿರಿಯರಾದ ಶ್ರೀ ಗೋಪಾಲಕೃಷ್ಣ ಕೊಲ್ಪೆ ಹಾಗೂ ಶ್ರೀ ಶಶಿಧರ ಕೊಲ್ಪೆ ಇವರನ್ನು ಶ್ರೀ ಜಗದ್ಗುರು ಶೃಂಗೇರಿ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿ ಗಳವರ ಪರವಾಗಿ ಸನ್ಮಾನಿಸಿದರು. ಶ್ರೀ ಹರಿಕಿರಣ್ ಕ್ರೊಲ ಇವರು ಕಾರ್ಯಕ್ರಮ ನಿರೂಪಣೆ ಮಾಡುವುದರೊಂದಿಗೆ ಧನ್ಯವಾದ ಗೈದರು.

ಧಾರ್ಮಿಕ ಸಭಾ ಕಾರ್ಯಕ್ರಮದ ತರುವಾಯ ಶ್ರೀ ಗೋಪಾಲಕೃಷ್ಣ ಕೃಪಾಪೋಷಿತ ಯಕ್ಷಗಾನ ಮಂಡಳಿ ಎಡನೀರು, ಕಾಸರಗೋಡು ಇವರಿಂದ 'ಶ್ರೀ ರಾಮದರ್ಶನ' ಎಂಬ ಯಕ್ಷಗಾನ ಬಯಲಾಟ ಪ್ರದರ್ಶನಗೊಂಡು ನೆರೆದಿದ್ದ ಎಲ್ಲಾ ಕಲಾಭಿಮಾನಿಗಳನ್ನು ರಂಜಿಸಿತು.

ಕೊಲ್ಪೆ ಸಹೋದರರ ಸಹಕಾರದೊಂದಿಗೆ ಶ್ರೀ ಶಶಿಧರ ಕೊಲ್ಪೆಯವರಿಂದ ನಿರ್ವಹಿಸಲ್ಪಡುವ ಶ್ರೀ ರಾಮಧಾಮ ಧ್ಯಾನ ಮಂದಿರವು ಭವಿಷ್ಯದ ದಿನಗಳಲ್ಲಿ ಅವರ ಪಾಲಿಗೆ ಶಾಂತಿಧಾಮವಾಗಿರಲಿ ಹಾಗೂ ಆಗಮಿಸುವ ಭಕ್ತ ಜನ ಬಂಧುಗಳು ದೇವತಾ ಕಾರ್ಯಗಳಲ್ಲಿ ತೊಡಗಿಸಿಕೊಂಡು ದೇವರ ಒಲುಮೆಗೆ ಪಾತ್ರರಾಗಲಿ ಎಂಬುದೇ ಹಾರೈಕೆ. ಯಾಂತ್ರಿಕ ಜೀವನದ ಕಾರಣದಿಂದಾಗಿ ಜೀವನದ ಅಶಾಂತಿಯ ತಾಣವಾಗಿರುವ ಆಧುನಿಕ ಕಾಲದಲ್ಲಿ ಈ ಶ್ರೀ ರಾಮಧಾಮ ಧ್ಯಾನ ಮಂದಿರ ಮನಃ ಶಾಂತಿಯನ್ನು ಒದಗಿಸುವ ಭಕ್ತಿ ಶ್ರದ್ಧಾ ಕೇಂದ್ರವಾಗಿ ಬೆಳಗಲಿ ಎಂಬುದೇ ಆಶಯ.

"ಲೋಕಾಃ ಸಮಸ್ತಾ ಸುಖಿನೋ ಭವಂತು"

ವರದಿ : **ಶ್ರೀ ಹರಿಕಿರಣ್ ಕ್ರೊಲ,**
ಶಿಕ್ಷಣ ಸಂಯೋಜಕರು ಬಿ.ಇ.ಒ ಕಛೇರಿ ಸುಳ್ಯ

# ಉಡುಪಿಯಲ್ಲಿ ಶ್ರೀಶಂಕರ ಜಯಂತಿ ಆಚರಣೆ

"ಕ್ರಿಸ್ತ ಪೂರ್ವದ ರೋಮನ್, ಗ್ರೀಕ್ ಧರ್ಮಗಳು ಅಳಿದು ಹೋಗಿವೆ. ಆದರೆ ಆ ಕಾಲದ ಸನಾತನ ವೈದಿಕ ಧರ್ಮವು ಹಲವಾರು ಅಡೆ ತಡೆಗಳನ್ನು ಎದುರಿಸಿಯೂ ಇನ್ನೂ ಜೀವಂತವಾಗಿದೆ. ಏಕೈಕ ಜಗನ್ನಾಮಕ ಶಕ್ತಿಯೇ ಬಹುರೂಪದಲ್ಲಿ ಕಾಣಿಸಿಕೊಂಡು ಘಟದೊಳಗಿನ ಆಕಾಶವು ಅದು ಒಡೆದು ಹೋದಾಗ ವಿಶ್ವಾಕಾಶದಲ್ಲಿ ಒಂದಾಗುವಂತೆ ವಿವಿಧ ರೂಪಗಳ ಆ ಶಕ್ತಿಗಳು ಅದರಲ್ಲಿ ಸೇರಿ ಹೋಗುತ್ತವೆ. ಸನಾತನ ಧರ್ಮದ ತತ್ವಗಳೇ ಆಮೇಲೆ ಹುಟ್ಟಿದ ಧರ್ಮಗಳಲ್ಲಿ ಅಡಗಿವೆ. ಇದನ್ನು ಪ್ರತಿಷ್ಠಾಪಿಸಿ ಹಲವು ದೇವತೆಗಳನ್ನು ಪಂಚಾಯತನ ರೂಪದಲ್ಲಿ ಸಮನ್ವಯಗೊಳಿಸಿದ ಮಹಾವ್ಯಕ್ತಿ ಶ್ರೀಶಂಕರಾಚಾರ್ಯರು" ಎಂದು ಉಡುಪಿ ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾದ ಡಾ। ಎನ್. ಲಕ್ಷ್ಮೀನಾರಾಯಣ ಭಟ್ಟರು ಬ್ರಹ್ಮತತ್ವವನ್ನು ವಿವರಿಸಿದರು.

ಜ್ಞಾನಭಾರತೀ (ರಿ.) ಉಡುಪಿ-ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಏರ್ಪಡಿಸಿದ ಶಂಕರ ಜಯಂತಿ ಸಮಾರಂಭದಲ್ಲಿ ಅಧ್ಯಯನ ಪೂರ್ಣವಾದ ಉಪನ್ಯಾಸವನ್ನು ಸಹೃದಯರ ಮನಮುಟ್ಟುವಂತೆ ಅವರು ಪ್ರಸುತಪಡಿಸಿದರು.

ಆರಂಭದಲ್ಲಿ "ಸರಿಗಮಪ" ಸಂಗೀತ ಶಾಲೆಯ ಸಂಗೀತವಿದುಷಿ ಉಮಾ ಉದಯಶಂಕರ ಹಾಗೂ



ವಿದ್ಯಾರ್ಥಿನಿಯರಿಂದ ಶಂಕರಾಚಾರ್ಯ ರಚಿತ ಅಂಬಾ ಸ್ತೋತ್ರವಾಚನ, ಕಾರ್ಯದರ್ಶಿ ಡಾ। ಎಸ್.ಎಲ್.ಕಾರ್ಣಿಕರಿಂದ ಸ್ವಾಗತ ಮತ್ತು ಪ್ರಸಾವನೆ ಹಾಗೂ ಕಾರ್ಯಕ್ರಮದ ಕೊನೆಯಲ್ಲಿ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರಿಂದ ಅಧ್ಯಕ್ಷ ಭಾಷಣ ನೆರವೇರಿತು. ಉಡುಪಿ ಕಾನೂನು ಮಹಾವಿದ್ಯಾಲಯದ ಮಾಜಿ ಪ್ರಾಂಶುಪಾಲರಾದ ಹಿರಿಯ ಚೇತನ ಶ್ರೀ ಎಚ್.ಪಿ. ಐತಾಳರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜ್ಞಾನಭಾರತೀ ಕಾರ್ಯಕಾರಿ ಸಮಿತಿಯ ಸದಸ್ಯ ಡಾ। ಉಪ್ಪಂಗಳ ರಾಮಭಟ್ಟರು ಧನ್ಯವಾದ ಅರ್ಪಿಸಿದರು. ಶ್ರೀ ದೇವಸ್ಥಾನದಲ್ಲಿ ಶಾರದಾ ಪೂಜೆ ಹಾಗೂ ಶಂಕರರ ಪೂಜೆ ನಡೆದು ಪ್ರಸಾದ ವಿತರಣೆಯೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

## ಹಾರ್ದಿಕ ಅಭಿನಂದನೆಗಳು



**ಶ್ರೀಮತಿ ವಿಜಯಾ ಆರ್. ರಾವ್**

(ಲೂತ್ರಾ ಆ್ಯಂಡ್ ಲೂತ್ರಾ ಲಾ ಫರ್ಮ್, ಮುಂಬಯಿ)

Euro Money Institutional investors PLc.

ಏಷ್ಯಾ ಲೀಡಿಂಗ್ ಲಾಯರ್ ಸರ್ವೆ ವಿಭಾಗವು ನೀಡಿದ "ಯೋಜನಾ ಆರ್ಥಿಕತೆಯಲ್ಲಿ ಏಷ್ಯಾ ಮತ್ತು ಪೆಸಿಫಿಕ್ ಪ್ರಾಂತ್ಯದ ಅತ್ಯುನ್ನತ ಹೆಗ್ಗಳಿಕೆಯ ಕಾನೂನು ತಜ್ಞೆ - ವರ್ಷ 2008" ಪ್ರಶಸ್ತಿಗೆ ಪಾತ್ರರಾದ ಶ್ರೀಮತಿ ವಿಜಯಾ ಆರ್. ರಾವ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳೊಂದಿಗೆ ಹೆಚ್ಚಿನ ಯಶಸ್ಸನ್ನು ಹಾರೈಸುವ,

**ಕೆ. ವೇಣುಗೋಪಾಲ ರಾವ್, ಶ್ರೀಮತಿ ವಿ. ರಾವ್, ಕೆ. ಸ್ವಾತಿ ರಾವ್**

## ಶುಭಾಶಯಗಳು

ಅಮೇರಿಕದ ಟೆನ್ನಿಸ್ ಪ್ರಾಂತ್ಯದಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಬಬಿತ ಅಣ್ಣಾಜಿ ಹಾಗೂ ಶ್ರೀ ಅಣ್ಣಾಜಿ ಪೆರ್ವಾಜೆ ಇವರ ಪುತ್ರಿ ಅಮೂಲ್ಯ ಪೆರ್ವಾಜೆ ಇವಳ ಭರತನಾಟ್ಯ ರಂಗಪ್ರವೇಶವು ಇದೇ ಬರುವ ಆಗಸ್ಟ್ ತಿಂಗಳಲ್ಲಿ ಅಮೇರಿಕದಲ್ಲಿ ನೆರವೇರಲಿದ್ದು ಮೊಮ್ಮಗಳ ಈ ಸಮಾರಂಭದಲ್ಲಿ ಭಾಗವಹಿಸುವ ಪ್ರಯುಕ್ತ ಅಲೆವೂರು ಶ್ರೀನಿವಾಸ ರಾವ್ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ರಮಾರವರು ತಾ.09-05-2008ರಂದು ವಿದೇಶಕ್ಕೆ ತೆರಳಿದರು.

ಕು। ಅಮೂಲ್ಯ ಪೆರ್ವಾಜೆಯ ರಂಗ ಪ್ರವೇಶೋತ್ಸವಕ್ಕಾಗಿ ಶ್ರೀ ಶಾರದಾ ಶುಭ ಹಾರೈಕೆಗಳು.

# ದಿವ್ಯ ಮೌನಧಾರಿ ಪಡು ಅಲೆವೂರು ವೆಂಕಟ್ರಾಯರು, ದೈವಾಧೀನ



ಸುದೀರ್ಘಕಾಲ ದೇವಿ ದುರ್ಗಾ ಪರಮೇಶ್ವರಿಯ ಸೇವೆಗಾಗಿ ತನ್ನನ್ನು ಅರ್ಪಿಸಿಕೊಂಡಿದ್ದ ಪಡು ಅಲೆವೂರು ವೆಂಟ್ರಾಯರು ತಮ್ಮ 93ನೇ ವಯಸ್ಸಿನಲ್ಲಿ ತಮ್ಮ ತುಂಬು ಸಂಸಾರದ ಸದಸ್ಯರನ್ನು ದುಃಖ ಸಾಗರದಲ್ಲಿ ಬಿಟ್ಟು ಪರಮಾತ್ಮನ ಪಾದ ಸೇರಿದರು.

ಕಲಾವಿದರೂ, ಕಲಾ ಪೋಷಕರೂ ಆಗಿದ್ದ ಅವರು ಆಧುನಿಕತೆಯ ಗೆಜ್ಜೆಧ್ವನಿ ನಮ್ಮ ಜಾನಪದ ಲೋಕದಲ್ಲಿ ತಾಂಡವವಾಡ ತೊಡಗಿದಾಗ ತಮ್ಮ ಮನೆಯಲ್ಲಿಯೇ ಯಕ್ಷಗಾನ, ತಾಳಮದ್ದಳೆ ಕೂಟಗಳನ್ನು ನಿರಂತರವಾಗಿ ಆಯೋಜಿಸುತ್ತಾ ಊರ ಜನರ ಮನೆ-ಮನಗಳಲ್ಲಿ ಸನಾತನ ಸಂಸ್ಕೃತಿಯ ಸೆಲೆ ಚಿಗುರೊಡೆದು ಬೆಳೆಯಲು ಕಾರಣರಾಗಿದ್ದರು. ಅವರಿಟ್ಟ ಹೆಜ್ಜೆಗಳಲ್ಲಿ ತನ್ನ ಹೆಜ್ಜೆಯನ್ನು ಸೇರಿಸಿ ನಡೆದ ಅವರ ಪತ್ನಿ ಶ್ರೀಮತಿ ಗಿರಿಜಾರವರು ಅವರಂತೆ ಯಕ್ಷಗಾನ ತಾಳಮದ್ದಳೆಯ ಮಹಾಅಭಿಮಾನಿ. ಆಯ್ದ ಕಲಾವಿದರ ಕೂಡುವಿಕೆಯ ಯಕ್ಷಗಾನ, ತಾಳಮದ್ದಳೆ ಕೂಟಗಳಿದ್ದರೆ, ಮಗನ ದ್ವಿಚಕ್ರ ವಾಹನವನ್ನೇರಿ 70-80 ಹರೆಯದಲ್ಲೂ ಗಾವುದ ದೂರ ಹಾರುತ್ತಿದ್ದ ಅವರ ಉತ್ಸಾಹ ಇಂದಿನ ತರುಣ ತರುಣಿಯರ ಪಾಲಿಗೆ ಒಂದು ಆದರ್ಶ ಮತ್ತು ಸವಾಲಾಗಿತ್ತು.

ಸುಮಾರು ಎಂಬತ್ತು ವರ್ಷಗಳ ಕಾಲ ಪಡು ಅಲೆವೂರು ದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ ದೇವತಾಕಾರ್ಯ ನಡೆಸಿಕೊಂಡು ಬರುತಿದ್ದ ವೆಂಕಟ್ರಾಯರಿಗೆ ದೇವಪೂಜಾ ವಿಧಿ ವಿಧಾನಗಳ ಪೂರ್ಣ ಅರಿವಿದ್ದು ಅನೇಕ ಮಂದಿ ಎಳೆಯ ಪುರೋಹಿತರಿಗೂ ಅವರು ಮಾರ್ಗದರ್ಶನ ಮಾಡುತಿದ್ದರು. ದೇವಸ್ಥಾನದ ಪಾತ್ರಿಯಾಗಿ ಆ ಸ್ಥಾನಕ್ಕೆ ಗೌರವ ತುಂಬಿದ್ದರು.

ಹಿರಿಯರು, ಕಿರಿಯರು, ಬಂಧುಗಳು ಪರಕೀಯರು ಎನ್ನವ ಬೇಧವಿಲ್ಲದೆ ಎಲ್ಲರನ್ನೂ ಪ್ರೋತ್ಸಾಹದಿಂದ ಕಾಣುತ್ತಿದ್ದ ವೆಂಟ್ರಾಯರು ಯಜಮಾನಿಕೆಯ ದರ್ಪಕ್ಕೆ ಒಂದು ಅಪವಾದ ಎನ್ನುವಂತಿದ್ದರು. ಯಜಮಾನಿಕೆಗೆ ಸಹಜವಾದ ಬಿಂಕ ಬಿರುಸುಗಳಿಲ್ಲದವರು. "ಎಂದೂ ಯಾರನ್ನೂ ಒಮ್ಮೆಯಾದರೂ ಬೈದವರಲ್ಲ ಅವರು" ಎಂದು ಅವರ ಬಗ್ಗೆ ಅವರ ಪತ್ನಿ ಹೇಳುವಾಗ ಎಂತಹ ಅಸಾಮಾನ್ಯ ಸಹನಾಶಕಿ ಅವರದು ಎಂಬುದು ಅರ್ಥವಾಗುತ್ತದೆ.

ಪ್ರಗತಿಪರ, ಕೃಷಿಕರಾಗಿದ್ದ ವೆಂಟ್ರಾಯರು ಒಂದಿಷ್ಟೂ ಕೃಷಿಭೂಮಿಯನ್ನೂ ವ್ಯರ್ಥವಾಗಿ ಖಾಲಿಬಿಡದೆ ಕೃಷಿ ಮಾಡುತಿದ್ದರು. ಹತ್ತು ಮಕ್ಕಳ ತಮ್ಮ ತುಂಬು ಸಂಸಾರವನ್ನು ಸಾಕುವ ಜತೆಗೆ ಕೊಡುಗೈದಾನಿಯಾಗಿ, ಸರಳ ಸಜ್ಜನರಾಗಿ ಪರಿಸರದ ಜನರಿಗೆ ಪ್ರಿಯರಾಗಿದ್ದರು. ಅದೇ ಮನೋಭಾವದ ಅವರ ಪತ್ನಿ ಗಿರಿಜಾರವರು ಅನ್ನಪೂರ್ಣೆಯಾಗಿ ಬಂಧುಗಳ ಆತಿಥ್ಯ ಮಾಡುತ್ತಿದ್ದರು. ಇಂದಿಗೂ ಅತಿಥಿ ಸತ್ಕಾರ ಅವರಿಗೆ ಅತ್ಯಂತ ಪ್ರೀತಿಯ ಕೆಲಸವಾಗಿದೆ.

ಪಡು ಅಲೆವೂರು ದುರ್ಗಾ ಪರಮೇಶ್ವರಿ ದೇಗುಲದ ಸೇವಾ ನಿರತ ಕೃಷ್ಣಾನಂದ ರಾವ್, ಭಾರತೀಯ ರೈಲ್ವೇ ಹೈದರಾಬಾದ್ ವಿಭಾಗದಲ್ಲಿ ಉದ್ಯೋಗಿಯಾಗಿರುವ ರಾಮಚಂದ್ರ ರಾವ್, ಉಡುಪಿಯ ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಅಂಕಿ-ಅಂಶಗಳ ಅಧಿಕಾರಿ ಯಾಗಿರುವ ನಾಗರಾಜ ರಾವ್, ಸಿಂಡಿಕೇಟ್ ಬ್ಯಾಂಕ್ ಮೈಸೂರಿನಲ್ಲಿ ಅಧಿಕಾರಿಯಾಗಿರುವ ಪುಟ್ಟಣ್ಣ ರಾವ್, ಉಡುಪಿ ಜಿಲ್ಲಾ ಪಂಚಾಯತ್ ಯೋಜನಾಧಿಕಾರಿಯಾಗಿರುವ ಶ್ರೀನಿವಾಸರಾವ್, ಕೊಲ್ಕತ್ತದಲ್ಲಿ ಸ್ಟೀಲ್ ಆಥಾರಿಟಿ ಆಫ್ ಇಂಡಿಯಾದ ದುರ್ಗಾಪುರ ಕಬ್ಬಿಣ ಉಕ್ಕಿನ ಕಾರ್ಖಾನೆಯಲ್ಲಿ ಇಂಜಿನಿಯರ್ ಆಗಿರುವ ವಿಠಲ್ ರಾವ್ ಹಾಗೂ ನಾಲ್ವರು ಹೆಣ್ಣು ಮಕ್ಕಳ ಸಹಿತ ಹತ್ತು ಮಕ್ಕಳನ್ನು ಅಗಲಿರುವ ರಾಯರ ಸೊಸೆಯಂದಿರು, ಮೊಮ್ಮಕ್ಕಳ ಬಗ್ಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ಆಗುತ್ತದೆ.

ಅನಾರೋಗ್ಯದಿಂದ ತನ್ನ ದೈನಂದಿನ ಆಚರಣೆಗಳಿಗೆ ಬೇರೆಯವರನ್ನು ಅವರು ಅವಲಂಬಿಸಿದ್ದು ಕೊನೆಯ ನಾಲ್ಕು ದಿನಗಳು ಮಾತ್ರ, ಅವರೊಬ್ಬ ಶತಾಯುಷಿಯಾದಾರು ಎಂದು ಆಶಿಸಿದ್ದ ಮಕ್ಕಳಿಗೆ ಬಂಧುಗಳಿಗೆ ಹಾಗೂ ಅಭಿಮಾನಿಗಳಿಗೆ ಈ ಸಜ್ಜನ, ಸಹೃದಯಿಯ ದಿಢೀರ್ ಅಗಲಿಕೆ ಅತೀವ ನೋವನ್ನುಂಟು ಮಾಡಿತು. ಮೃತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ ಎಂದು ನಾವೆಲ್ಲರೂ ಪ್ರಾರ್ಥಿಸುತ್ತೇವೆ.

Owned & Published by ·. Y. Bhuvanendra Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org